# ವಿದ್ಯಾರ್ಥಿ ಜೀವನದಲ್ಲಿ ಪ್ರೀತಿ, ಪ್ರೇಮ..!



**ನಗರ ಪ್ರದೇಶಗಳಲ್ಲಿ ವಿದ್ಯಾರ್ಥಿಗಳು ತರಗತಿಗೆ ಚಕ್ಕರ್ ಹೊಡೆದರೆ ಪೋಷಕರಿಗೆ ಮೊಬೈಲ್ ಮೂಲಕ ಮೆಸೇಜ್ ಕಳುಹಿಸುವ ವ್ಯವಸ್ಥೆಯಾದರೂ ಇದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಪೋಷಕರ ಮುಗ್ಧತೆ ಮತ್ತು ಶಿಕ್ಷಣ ಇಲ್ಲದಿರುವುದೇ ಕೆಲವು ವಿದ್ಯಾರ್ಥಿಗಳಿಗೆ ಬಂಡವಾಳವಾಗಿದೆ.**

■ **ವೇದಾವತಿ. ಎಂ**
ಚಿತ್ರ: ಸತೀಶ್ ಬಡಿಗೇರ್

ನನ್ನದು ಶಿಕ್ಷಕ ವೃತ್ತಿ. ನನ್ನ ವೃತ್ತಿಯ ಅನುಭವದಲ್ಲಿ ವಿದ್ಯಾರ್ಥಿಗಳ ಈ ಪ್ರೀತಿ–ಪ್ರೇಮಗಳ ಅಧ್ಯಾಯಗಳು ಶಿಕ್ಷಕರನ್ನೇ ಬೆಚ್ಚಿಬೀಳಿಸುವಂತಿವೆ. ಹೌದು, ನಮ್ಮ ಬಾಲ್ಯದ ದಿನಗಳಲ್ಲಿ, ಪ್ರೌಢಾವಸ್ಥೆಯಲ್ಲೂ ಪ್ರೇಮ ಪತ್ರ, ಪ್ರೇಮ ಪ್ರಕರಣಗಳ ಬಗ್ಗೆ ಮಾತನಾಡುವುದೂ ಅಪರಾಧ ಎನ್ನುವ ಸನ್ನಿವೇಶ ಇತ್ತು. ಆಗ ಅದು ಮುಜುಗರ ಮತ್ತು ನಾಚಿಕೆ ಪಟ್ಟುಕೊಳ್ಳುವ ವಿಚಾರ. ಸ್ನೇಹಿತರೊಂದಿಗೂ ಈ ವಿಷಯಗಳನ್ನು ಮಾತಾಡಲು ಯೋಚಿಸಬೇಕಾದ ಪರಿಸ್ಥಿತಿ ಇತ್ತು. ಕ್ರಮೇಣ ಪಿ.ಯು.ಸಿ. ಅಥವಾ ಪದವಿ ಶಿಕ್ಷಣ ಹಂತದಲ್ಲಿ ಇವೆಲ್ಲಾ ಮಾಮೂಲಿ ಎನ್ನುವಂತಾಗಿತ್ತು.

ಆದರೆ ಇಂದು? ಕೆಲವೊಮ್ಮೆ ನಿಜಕ್ಕೂ ಭಯವೆನಿಸುತ್ತದೆ– ಈ ಬೆಳವಣಿಗೆಗಳನ್ನು ಕಂಡು. ಕಾರಣ ಪ್ರೌಢಶಾಲೆ, ಪ್ರಾಥಮಿಕ ಶಾಲಾ ಹಂತದ ಮಕ್ಕಳಲ್ಲೂ ಪ್ರೇಮ– ಪ್ರೀತಿಗಳ ವಿಚಾರ ಮಾಮೂಲು ಎನ್ನುವಂತಹ ಚರ್ಚೆಯ ವಿಷಯ. ಹೈಸ್ಕೂಲ್ ಮೆಟ್ಟಿಲು ಹತ್ತುವ ಮುನ್ನವೇ ಪ್ರೇಮ ಪತ್ರ ಬರೆದು ರಾಕೆಟ್ ಎಸೆಯುವ ಪೀಳಿಗೆ ಇಂದು ನಮಗೆ ಕಾಣಸಿಗುತ್ತಿದೆ. ಪ್ರಾಥಮಿಕ ಅಂದರೆ 6 ರಿಂದ 8ನೇ ತರಗತಿ ಮಕ್ಕಳಲ್ಲೂ ಇಂತಹ ಅಂಶಗಳು ಇಣುಕಿದರೂ, ಸೂಕ್ತ ಮಾರ್ಗದರ್ಶನದಿಂದ ಅಲ್ಲೇ ಮರೆಯಾಗಿಬಿಡುತ್ತವೆ. ಆದರೂ ಬಾಲಿಶ ಪ್ರೇಮಗಳು, ಪ್ರೇಮಪತ್ರಗಳು ಕೆಲವೊಮ್ಮೆ ಇಣುಕಿ ನಮ್ಮನ್ನು ಅಚ್ಚರಿಗೀಡು ಮಾಡುತ್ತವೆ.

ಇನ್ನು ಪ್ರೌಢಶಾಲಾ ಹಂತಕ್ಕೆ ಬಂದರೆ, ಪ್ರೌಢತೆ ದೇಹಕ್ಕೇ ಹೊರತು ಮನಸ್ಸಿಗಾಗಿರುವುದಿಲ್ಲ. ಈ ಹಂತದಲ್ಲೇ ಮಕ್ಕಳು ಅದರಲ್ಲೂ ಹೆಣ್ಣು ಮಕ್ಕಳು ಹೆಚ್ಚಾಗಿ ಪ್ರೀತಿ– ಪ್ರೇಮ ಎಂಬ ಆಕರ್ಷಣೆಗೆ ಒಳಪಟ್ಟು ತಮ್ಮ ಶೈಕ್ಷಣಿಕ ಮಾರ್ಗದಲ್ಲಿ ದಾರಿ ತಪ್ಪುತ್ತಿರುವುದು ವಿಪರ್ಯಾಸ. ಇದನ್ನೇ ನಾವು ಅಪ್ರಬುದ್ಧ ಪ್ರೇಮ ಅಥವಾ ಆಕರ್ಷಣೆ ಎಂದು ಗುರುತಿಸಬಹುದು.

ಈ ವಯಸ್ಸೇ ಅಂದರೆ 13 ರಿಂದ 16ರ ಹದಿಹರೆಯದ ವಯಸ್ಸು ಬಹಳ